# Institutional efforts towards Social Harmony and Tolerance

A National day is a day on which celebrations mark the Statehood or Nationhood of a state or its people. It may be the date of Independence, of becoming a Republic, of becoming a Federation, or a significant date for a patron -saint or a ruler (such as a birthday, accession, or removal).

A National day is an important date or day in the country that shows the nationality of the country. When a country gets autonomy or a new territory arises and there is any kind of social or judicial change for the nation, this momentous day becomes of public prestige and is marked as a national day. A country may have more than one national day, which is announced by the government on behalf of the public demand and generally on this day the government declares a public holiday.

There are three National Days of India declared by the government of India, which are Republic Day (26 January), Independent Day(15 August), and Gandhi Jayanti (2 October). Apart from this, many important days are celebrated every year in India and the world.

In India, we celebrate various famous festivals and events every year, which have some social and cultural importance. It is helpful to stay aware of these important days and dates and their significance and never to miss any special event.

National Service Scheme (NSS) was introduced in 1969 with the primary objective of developing the personality and character of the student youth through voluntary community service. 'Education through Service' is the purpose of the NSS. The ideological orientation of the NSS is inspired by the ideals of Mahatma Gandhi.

**NSS Unit**: The National Service Scheme is an Indian government – sponsored public service program. Service program conducted by the Ministry of Youth Affairs and Sports of the Government of India. The NSS Unit is been constituted here in 1987. Our college National Service Scheme has 2 units; each unit has above 100 volunteers.






**ಸಂವಿಧಾನ ದಿನ** | ವಿದ್ಯಾವರ್ಧಕ ಕಾನೂನು ಕಾಲೇಜಿನ ನಿರ್ದೇಶಕ ಪ್ರೊ.ಕೆ.ಬಿ. ವಾಸುದೇವ ಅಭಿಮತ

# ಸಂವಿಧಾನವೆಂಬುದು ಕಣ್ಣಿಗೆ ಕಾಣುವ ದೇವರು

• **ಕನ್ನಡಪ್ರಭ ವಾರ್ತೆ** ಮೈಸೂರು

ಸಂವಿಧಾನ ಕಣ್ಣಿಗೆ ಕಾಣುವ ದೇವರು, ಎಲ್ಲಾ ಕಾನೂನು ಸಂವಿಧಾನಾತ್ಮಕವಾಗಿರಬೇಕು ಎಂದು ವಿದ್ಯಾವರ್ಧಕ ಕಾನೂನು ಕಾಲೇಜಿನ ನಿರ್ದೇಶಕ ಪ್ರೊ.ಕೆ.ಬಿ. ವಾಸುದೇವ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಕಾನೂನು ವಿಭಾಗ ಮತ್ತು ಐಕ್ಯೂಎಸಿ ಸಹಯೋಗ ದೊಂದಿಗೆ ಸಂವಿಧಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಭಾರತ ಸಂವಿ ಧಾನದ ಆಶಯ ಮತ್ತು ಮಹತ್ವ ಕುರಿತ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಕಾನೂನು ಪರಿಪಾಲನೆ ಪ್ರತಿಯೊಬ್ಬ ನಾಗರೀಕನ ಕರ್ತವ್ಯ. ಕಾನೂನು ಪರಿಪಾಲನೆ ಮಾಡುವ ಮೂಲಕ ನಮ್ಮ ಮಾನಸಿಕ ಸ್ಥಿತಿ ಸ್ಥಿರವಾಗಿರಬೇಕು. ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು. ಪ್ರಜೆಗಳು ಕಾನೂನು ಕಟ್ಟಲೆಗಳನ್ನು ಪಾಲಿಸುವಲ್ಲಿ ಪ್ರಮುಖ ಪಾತ್ರವಹಿಸಿ, ಸಂವಿಧಾನಕ್ಕೆ ಗೌರವ ನೀಡಬೇಕು ಎಂದು ಅವರು ಕರೆ ನೀಡಿದರು. ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳು ಒಂದು ಕಲ್ಯಾಣ ರಾಜ್ಯವಾಗಿ ನಿರ್ಮಿಸಲು ಅಗತ್ಯವಾಗಿದೆ. 1987ರ ರೂಪ ಕನ್ವಾರ್ ಪ್ರಕರಣ ಸ್ಮರಿಸಿ, ಮಹಿಳೆಯರ ಮೇಲೆ ಜರುಗುತ್ತಿರುವ ಶೋಷಣೆ ಬಗ್ಗೆ ತಿಳಿಸಿದರು. ಶಾಂತಿಯಿಂದ ಬದುಕಬೇಕಾದರೆ ಸಮಾನತೆ ಅಗತ್ಯ. ಅಸಮಾನತೆಯನ್ನು ಹೋಗಲಾಡಿಸಲು ಸಂವಿಧಾನವನ್ನು ರಚಿಸಲಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂವಿಧಾನದ ಮತ್ತು ಬದುಕಿನ ಆಶಯ ಒಂದೇ ಆಗಿದ್ದಲ್ಲಿ ಅಭಿವೃದ್ಧಿ ಸಾಧ್ಯ. ವಿದ್ಯಾರ್ಥಿಗಳು ಸಂವಿಧಾನದ ಹಕ್ಕು ಮತ್ತು ಕರ್ತವ್ಯಗಳನ್ನು ಸರಿಯಾಗಿ ಅರ್ಥೈಸಿಕೊಂಡು ಬದುಕಿನಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಿ ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಿ.ಎಸ್. ಸಿದ್ದರಾಜು ಇದ್ದರು. ವಿದ್ಯಾರ್ಥಿ ಎನ್. ಆದರ್ಶ ಪ್ರಾರ್ಥಿಸಿದರು. ಕಾನೂನು ವಿಭಾಗದ ಮುಖ್ಯಸ್ಥೆ ಮಂಜುಳ ಸ್ವಾಗತಿಸಿದರು. ಎಸ್. ರಾಜು ವಂದಿಸಿದರು. ಬಿ.ಎಲ್. ಸಂದರ್ಶ ನಿರೂಪಿಸಿದರು.



ಸಂವಿಧಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಭಾರತ ಸಂವಿಧಾನದ ಆಶಯ ಮತ್ತು ಮಹತ್ವ ಕುರಿತ ಕಾರ್ಯಕ್ರಮವನ್ನು ಪ್ರೊ.ಕೆ.ಬಿ. ವಾಸುದೇವ ಉದ್ಘಾಟಿಸಿದರು.

ಕನ್ನಡಪ್ರಭ Wed, 07 December 2022
https://kpepaper.asianetnews.com/c/71072966



ಮೈಸೂರು ಮಿತ್ರ
ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಡಿಸೆಂಬರ್ 7 ಬುಧವಾರ 2022

# ಮಹಾಜನ ಕಾಲೇಜಲ್ಲಿ ಯುವ ಸೌರಭ ಸಂಭ್ರಮ

ಮೈಸೂರು,ಡಿ.6 (ಆರ್‌ಕೆಬಿ) –ಮೈಸೂರಿನ ಜಯಲಕ್ಷ್ಮಿಪುರಂ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಯುವಜನರು ಸಂಭ್ರಮದಿಂದ ನಲಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಗಮ ಸಂಗೀತ, ಜಾನಪದ ಗೀತೆ, ನೃತ್ಯರೂಪಕ, ಕಂಸಾಳೆ, ನಾಟಕ ಇತರೆ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ಮೈಸೂರಿನ ನಿಸರ್ಗ ಮತ್ತು ವಿಸ್ಮಯ ಸಹೋದರಿಯರಿಂದ ಸುಗಮ ಸಂಗೀತ, ಕಾಲೇಜಿನ ಸುಪ್ರೀತ್ ಎಸ್.ಭಾರದ್ವಾಜ್ ಮತ್ತು ತಂಡ ಸಾರಂತ ರಂಗ ತಂಡದ ವತಿಯಿಂದ ಜಾನಪದ ಗೀತೆ, ಕಾಲೇಜಿನ ವಿದ್ಯಾರ್ಥಿನಿಯರಾದ ಕೆ.ಅನ್ವಿತಾ ಮತ್ತು ತಂಡ ಪ್ರದರ್ಶಿಸಿದ ಮಹಿಳಾ ಕಂಸಾಳೆ ಖುಷಿ ಕೊಟ್ಟಿತು.

ಪೂಜಾ ಸುಗಮ್ ಮತ್ತು ತಂಡದಿಂದ ಕರ್ನಾಟಕ ಕಲಾ ದೀಪ್ತಿ ನೃತ್ಯ ರೂಪಕ, ತಿ.ನರಸೀಪುರ ತಾಲೂಕಿನ ಪುನೀತ್ ಕುಮಾರ್ ಪಿ. ಮೂಗೂರು ಮತ್ತು ತಂಡದ ಡೊಳ್ಳು ಕುಣಿತ, ಗೌತಮ್ ಮತ್ತು ತಂಡದಿಂದ 'ಬೇಕಾಗಿದ್ದಾರೆ! ಯಾಕೆ ಏನು ಕೇಳಬೇಡಿ' ನಾಟಕ ವಿದ್ಯಾರ್ಥಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಇದಕ್ಕೂ ಮುನ್ನ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ ಮುರಳೀಧರ ಭಾಗವತ್ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾಲೇಜಿನ ಸಾಂಸ್ಕೃತಿಕ ರಂಗತಂಡ ಸಂಚಾಲಕ ಎ.ರಾಜೇಶ್, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ್ ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸ್ವಾಗತಿಸಿದರು.



ಯುವ ಸೌರಭ ಸಂಭ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳು.



